1028 (1617) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಾಮರಾಜನಗರ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿವೆಯೇ;

ಆ) ಹಾಗಿದ್ದಲ್ಲಿ, ವಿವರ ಒದಗಿಸುವುದು;

ಇ) ಹಾಗಿಲ್ಲದಿದ್ದಲ್ಲಿ ಸರ್ಕಾರಕ್ಕೆ ಈ ಕೈಗಾರಿಕೆಗಳನ್ನು ತೆರೆಯುವ ಉದ್ದೇಶವಿದೆಯೇ;

ಈ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು.

ಆ)

	ಘಟಕದ ಹೆಸರು	ಉತ್ಪನ್ನ	ಬಂಡವಾಳ (ಲಕ್ಷಗಳಲ್ಲಿ)	ಉದ್ಯೋಗ
1.	ಮೆ: ವೆಲನ್ ಟೆಕ್ಸ್‌ಟೈಲ್ಸ್	ಕಾಟನ್ ಕೋನ್	392.16	105
2.	ಗವರ್ನ್‌ಮೆಂಟ್ ಸಿಲ್ಕ್ ಫ್ಯಾಕ್ಟರಿ	ಸಿಲ್ಕ್ ಯಾರ್ನ್	289.56	93
3.	ಗವರ್ನ್‌ಮೆಂಟ್ ಸಿಲ್ಕ್ ಫ್ಯಾಕ್ಟರಿ ಸಂತೇಮಾರಹಳ್ಳಿ	ಸಿಲ್ಕ್ ಯಾರ್ನ್	407.70	99
4.	ಗವರ್ನ್‌ಮೆಂಟ್ ಸಿಲ್ಕ್ ಫ್ಯಾಕ್ಟರಿ ಕೊಳ್ಳೇಗಾಲ	ಸಿಲ್ಕ್ ಯಾರ್ನ್	229.94	109
5.	ಗವರ್ನ್‌ಮೆಂಟ್ ಸಿಲ್ಕ್ ಫ್ಯಾಕ್ಟರಿ ಮೂಡಿಗುಂಡಮ ಕೊಳ್ಳೆಗಾಲ ತಾಲ್ಲೂಕು	ಸಿಲ್ಕ್ ಯಾರ್ನ್	137.29	40
6.	ಗವರ್ನ್‌ಮೆಂಟ್ ಸಿಲ್ಕ್ ಫ್ಯಾಕ್ಟರಿ ಮಾಂಬಳ್ಳಿ	ಸಿಲ್ಕ ಯಾರ್ನ್	301.37	110

ಇ) ಚಾಮರಾಜನಗರ ಜಿಲ್ಲೆಯಲ್ಲಿ 16.673 ಲಕ್ಷ ಬಂಡವಾಳ ಹೂಡಿಕೆಯ ಹಾಗೂ 1930 ಉದ್ಯೋಗಾವಕಾಶ ಒದಗಿಸುವಂತೆ 4 ಭಾರಿ ಮತ್ತು ಮಧ್ಯಮ ಯೋಜನೆಗಳಿಗೆ ರಾಜ್ಯ ಏಕ ಗವಾಕ್ಷಿ ಅನುಮೋದನೆ ಸಮಿತಿಯು ಕೆಳಕಂಡಂತೆ ಅನುಮೋದನೆಯನ್ನು ನೀಡಿರುತ್ತದೆ. ಈ ಕೈಗಾರಿಕೆಗಳು ಅನುಷ್ಠಾನದ ಹಂತದಲ್ಲಿರುತ್ತವೆ.

	ಘಟಕದ ಹೆಸರು	ಉತ್ಪನ್ನ	ಬಂಡವಾಳ (ಲಕ್ಷಗಳಲ್ಲಿ)	ಉದ್ಯೋಗ
1.	ಶೆನಾನ್‌ಆಗ್ರೋ ಪ್ರಾಡಕ್ಟ್ಸ್ ಪ್ರೈ.ಲಿ. ಗುಂಡ್ಲು ಪೇಟೆ	ರಿಫೈನ್‌ಡ್ ಪಾಪೈನ್	1600.00	1500
2.	ರಾಜ್ ಶುಗರ್ ಮಿಲ್ಸ್ ಪ್ರೈ.ಲಿ. ಚಂದಕವಾಡಿ ಗ್ರಾಮ	ಶುಗರ್	4925.00	350
3.	ಎಸ್.ಎಲ್.ಎಸ್. ಪವರ್ ಇಂಡಸ್ಟ್ರೀಸ್ ಲಿ. ಕೊಳ್ಳೇಗಾಲ	ಮೆ: ವ್ಯಾಟ್ ಮಿನಿ ಹೈಡಲ್ ಸ್ಕೀಮ್	1948.00	60
4.	ರಂಗನಾಥ್ ಸ್ವಾಮಿ ಮಿನಿ ಹೈಡಲ್ ಪ್ರಾಜೆಕ್ಟ್ ಶಿವನಸಮುದ್ರ	3x8.25		20

ಈ) ಚಾಮರಾಜನಗರ ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಗಾಗಿ ಗುಂಡ್ಲುಪೇಟೆಯ ಮೈಸೂರು ರಾಷ್ಟ್ರೀಯ ಹೆದ್ದಾರಿಯ ಟೋಲ್ ಗೇಟ್ ಬಳಿ 12.06 ಎಕರೆ ಭೂಮಿಯಲ್ಲಿ ಹಾಗೂ ಚಾಮರಾಜನಗರ ಗುಂಡ್ಲುಪೇಟೆ ರಸ್ತೆಯಲ್ಲಿ 12.4 ಎಕರೆ ಭೂಮಿಯಲ್ಲಿ ಕೆ.ಎಸ್.ಎಸ್.ಐ.ಡಿ.ಸಿ. ಇವರ ವತಿಯಿಂದ ಕೈಗಾರಿಕಾ ವಸಹಾತು ಸ್ಥಾಪಿಸಲು ಉದ್ದೇಶಿಸಲಾಗಿದೆ. ಕೊಳ್ಳೇಗಾಲ ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಧನಗೆರೆ ಬಳಿ 54.74 ಎಕರೆ ಸರ್ಕಾರಿ ಭೂಮಿಯಲ್ಲಿ ಕೈಗಾರಿಕಾ ವಸಹಾತನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

1029 (1618) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಾಮರಾಜನಗರ ಜಿಲ್ಲೆಯಲ್ಲಿ ಮಂಜೂರಾಗಿರುವ ಗ್ರಾಮಲೆಕ್ಕಿಗರ ಹುದ್ದೆ ಎಷ್ಟು?

ಆ) ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) 224

ಆ) 14

ಇ) ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಗ್ರಾಮಲೆಕ್ಕಿಗರ ನೇರನೇಮಕಾತಿ ಪ್ರಕ್ರಿಯೆಯು ಹಲವು ವರ್ಷಗಳಿಂದ ಸ್ಥಗಿತಗೊಂಡಿದೆ. ಇದರಿಂದ ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಇರುವ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ.